## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **517** |
| **ಸದಸ್ಯರ ಹೆಸರು** | : | **ಶ್ರೀ. ಪ್ರತಾಪ್ ಸಿಂಹ ನಾಯಕ್.ಕೆ** |
| **ಉತ್ತರಿಸುವ ದಿನಾಂಕ** | : | **19.02.2024** |
| **ಉತ್ತರಿಸುವ ಸಚಿವರು** | : | **ಮಾನ್ಯ ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ ಸಚಿವರು.** |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅರ್ಹ ಅರಣ್ಯ ಒತ್ತುವರಿದಾರರ ಪ್ರಕರಣಗಳನ್ನು ಪರಿಹರಿಸುವ ಸಲುವಾಗಿ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಗಳನ್ನೊಳಗೊಂಡ ಜಂಟಿ ಮರು ಸರ್ವೆ ನಡೆಸಿ ಅರ್ಹ ಅರಣ್ಯ ಒತ್ತುವರಿದಾರರಿಗೆ ನ್ಯಾಯ ದೊರಕಿಸಿಕೊಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ: | ದಿನಾಂಕ:27.04.1978ರ ಪೂರ್ವದಲ್ಲಿ ಅರಣ್ಯ ಒತ್ತುವರಿ ಪ್ರದೇಶಗಳನ್ನು ಸಕ್ರಮಗೊಳಿಸಲು ಕರ್ನಾಟಕ ಅರಣ್ಯ ಕಾಯ್ದೆ-1963ರ ಕಲಂ-28ರಲ್ಲಿ ಡಿ-ನೋಟಿಫೈ/ಡಿ-ರಿಸರ್ವ್ ಮಾಡಬೇಕಾಗಿರುತ್ತದೆ.<br>ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ರವರ ಪತ್ರ ಸಂ.:ನಂ. 8-50/95-FC, ದಿನಾಂಕ: 15.05.1996 ಹಾಗೂ ರಾಜ್ಯ ಸರ್ಕಾರದ ಆದೇಶ ಸಂಖ್ಯೆ:ಎಫ್‌ಇಇ 5 ಎಫ್‌ಜಿಎಲ್ 90, ಬೆಂಗಳೂರು, ದಿನಾಂಕ:05.05.1997 ರನ್ವಯ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುವುದನ್ನು ಪರಿಗಣಿಸಿ, ಅರ್ಹ ಒತ್ತುವರಿದಾರರು ಹಾಗೂ ವಿಸ್ತೀರ್ಣವನ್ನು ಗುರುತಿಸಿ ಸಂಪೂರ್ಣ ವಿವರದೊಂದಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. |
| ಆ) | ಭೂ ಮಂಜೂರಾತಿ ಕಾಯ್ದೆ ಮತ್ತು ನಿಯಮಗಳು ಹಾಗೂ ಇತರೆ ಕಾನೂನಾತ್ಮಕ ನಿಯಮಗಳಡಿಯಲ್ಲಿ ಈ ಹಿಂದೆ ಮಂಜೂರಾದ ಎಲ್ಲಾ ಅರಣ್ಯ ಭೂಮಿಯನ್ನು "Denotification" ಮಾಡದಿರುವುದರಿಂದ ಇಂದಿಗೂ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿರುವುದರಿಂದ ಭೂ ಮಂಜೂರಾತಿದಾರರು ತೊಂದರೆಗೊಳಗಾಗಿದ್ದು ಅದನ್ನು ಪರಿಹರಿಸಲು ಸರ್ಕಾರ ಇದುವರೆಗೆ ಏನು ಕ್ರಮ ಕೈಗೊಂಡಿದೆ: | ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 13.11.2000 ರ IA No. 2 in WP No. 337/1995, and again reiterated by the Supreme Court on 09.02.2004 in IA No. 16 that "…Pending further orders, no de-reservation of Forest/ Sanctuaries/National Parks shall be effected" ಎಂದು ಆದೇಶಿಸಿರುತ್ತಾರೆ.<br>ಈ ಆದೇಶದ ಹಿನ್ನೆಲೆಯಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶಗಳನ್ನು ಸಕ್ರಮಗೊಳಿಸಲು ಕಾನೂನಾತ್ಮಕವಾಗಿ ಸಲಹೆಯನ್ನು ಪಡೆದು ಸರ್ವೋಚ್ಚ ನ್ಯಾಯಾಲಯದಲ್ಲಿ IA ಸಲ್ಲಿಸಲು ಕ್ರಮವಹಿಸಲಾಗಿದೆ. |
| ಇ) | ಸದರಿ ಭೂ ಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ನಿಲುವೇನು; ಹಾಗೂ ಕೈಗೊಂಡಿರುವ ಪರಿಹಾರ ಕ್ರಮಗಳೇನು? | |

**ಸಂಖ್ಯೆ: FEE 14 FGL 2024(E)**

Beeavell

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು
ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು